**ಓ ಎಸ್ ನಂಃ 116-16**
**ಪಿ ಡಬ್ಲ್ಯೂ ಃ 1**

**ದಿಃ 27-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 4 ನೇ ಪ್ರತಿವಾದಿ ಶ್ರೀ ಎಂ ಸಿ ಜೆ ವಕೀಲರಿಂದ**

18. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುವುದಿಲ್ಲ ಎಂದರೆ ನಿಜ. ನಾನು ದಾಖಲೆಗಳನ್ನು ತೋರಿಸಿದರೆ ಅವುಗಳನ್ನು ನಾನು ಗುರುತಿಸಬಹುದು ಎಂದರೆ ದಾಖಲೆಗಳನ್ನು ನೋಡಬೇಕಾಗುತ್ತದೆ ಎಂದು ಹೇಳುತ್ತಾರೆ. ನನ್ನ ವಾದ ಪತ್ರದ ವಿಷಯ ಗೊತ್ತಿದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಗೊತ್ತಿದೆ. ನಾನು ಈ ದಾವೆಯಲ್ಲಿ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಗೊತ್ತಿದೆ. ನನ್ನ ಗಂಡನ ಹೆಸರು ಬೆಟ್ಟಯ್ಯ ಆಗಿರುತ್ತದೆ. ಬೆಟ್ಟಯ್ಯರವರ ತಂದೆಯ ತಂದೆ ಹೆಸರು ಚೆನ್ನಪ್ಪ ಅಲಿಯಾಸ್ ಚೆನ್ನಯ್ಯ ಎಂದರೆ ನಿಜ. ಬೆಟ್ಟಯ್ಯರವರ ತಂದೆಯ ಹೆಂಡತಿಯ ಹೆಸರು ಗೊತ್ತಿಲ್ಲ. ಚೆನ್ನಯ್ಯರವರಿಗೆ 4 ಜನ ಗಂಡು ಮಕ್ಕಳಿದ್ದು ಅವರ ಹೆಸರು ಚೆಲುವಪ್ಪ, ಮೋಟಣ್ಣ, ಅಯ್ಯಣ್ಣಪ್ಪ ಮತ್ತು ನರಸಿಂಹಪ್ಪ ಆಗಿರುತ್ತದೆ. ಚೆಲುವಪ್ಪರವರ ಹೆಂಡತಿಯ ಹೆಸರು ಗೊತ್ತಿಲ್ಲ. ಚೆಲುವಪ್ಪರವರಿಗೆ ಇಬ್ಬರು ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳಿದ್ದು ಅವರ ಹೆಸರು ಬೆಟ್ಟಯ್ಯ, ಚೆನ್ನಪಿಳ್ಳಯ್ಯ, ಪುಟ್ಟಮ್ಮ, ಚನ್ನಮ್ಮ ಮತ್ತು ನಂದಮ್ಮ ಆಗಿರುತ್ತದೆ. ಚೆನ್ನಪಿಳ್ಳಯ್ಯನ ಹೆಂಡತಿಯ ಹೆಸರು ನಂಜಮ್ಮ ಆಗಿರುತ್ತದೆ. ಚೆನ್ನಪಿಳ್ಳಯ್ಯ ಹಾಗೂ ನಂಜಮ್ಮರವರಿಗೆ 4 ಜನ ಗಂಡು ಮಕ್ಕಳು ಒಬ್ಬರು ಹೆಣ್ಣು ಮಗಳು ಇರುತ್ತಾರೆ. ಚೆನ್ನಪಿಳ್ಳಯ್ಯರವರ ಮಕ್ಕಳ ಹೆಸರು ರಾಜ, ಮುನಿಕೃಷ್ಣ, ನರಸಿಂಹಮೂರ್ತಿ ಮತ್ತು ಗೋವಿಂದ ಮತ್ತು ಲಕ್ಕಮ್ಮ ಆಗಿರುತ್ತದೆ. ಚೆನ್ನಪಿಳ್ಳಯ್ಯರವರ ಹೆಂಡತಿ ಮತ್ತು ಮಕ್ಕಳು ಜೀವಂತ ಇರುತ್ತಾರೆ. ಚೆನ್ನಪಿಳ್ಳಯ್ಯರವರು ತೀರಿಕೊಂಡಿದ್ದು ಅವರ ಮರಣದ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ.

19. ನನಗೆ ಮತ್ತು ಬೆಟ್ಟಯ್ಯರವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಇರುತ್ತಾರೆ. ನನ್ನ ಮಕ್ಕಳ ಹೆಸರು ಶಾಂತಮ್ಮ, ನಾರಾಯಣ ಮತ್ತು ಕೃಷ್ಣಮೂರ್ತಿ ಆಗಿರುತ್ತದೆ. ನಾರಾಯಣರವರಿಗೆ ಇಬ್ಬರು ಗಂಡು ಮಕ್ಕಳಿದ್ದು ಅವರ ಹೆಸರು ದಿಲೀಪ ಮತ್ತು ಮಹೇಶ ಇರುತ್ತದೆ. ಕೃಷ್ಣಮೂರ್ತಿರವರ ಮಕ್ಕಳ ಹೆಸರು ನವೀನ ಮತ್ತು ಚೆಲುವಾಂಬೆ ಆಗಿರುತ್ತದೆ. ನನ್ನ ಹೆಣ್ಣು ಮಗಳಿಗೆ ಮಕ್ಕಳು ಇರುವುದಿಲ್ಲ. ಮೇಲೆ ಹೇಳಿದ ಚೆನ್ನಪ್ಪರವರ ವಂಶಸ್ಥರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನಿಜ.

20. ಮೋಟಯ್ಯರವರು ತೀರಿಕೊಂಡಿದ್ದು ಅವರ ಮೊಮ್ಮಕ್ಕಳು ಜೀವಂತ ಇರುತ್ತಾರೆ. ಮೋಟಯ್ಯರವರ

ಮೊಮ್ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನಿಜ. ಮೋಟಯ್ಯರವರ ಮಗನ ಹೆಸರು ಸಂಪಂಗಯ್ಯ ಆಗಿರುತ್ತದೆ. ಅಯ್ಯಣ್ಣಪ್ಪರವರ ಮಗನ ಹೆಸರು ಚೆನ್ನಪ್ಪ ಇದ್ದು ಅವರು ಜೀವಂತ ಇರುತ್ತಾರೆ. ನರಸಿಂಹಯ್ಯರವರ ಮಗನ ಹೆಸರು ಸಿಂಗ್ರಪ್ಪ ಆಗಿದ್ದು ಅವರು ಜೀವಂತ ಇರುತ್ತಾರೆ. ಈ ದಾವೆಯಲ್ಲಿ ನಾನು ಮೋಟಯ್ಯ, ಅಯ್ಯಣ್ಣಪ್ಪ ಮತ್ತು ನರಸಿಂಹಯ್ಯರವರ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನಿಜ.

21. ಮೂಲತಃ ಚೆನ್ನಪ್ಪರವರಿಗೆ ಸರ್ವೆ ನಂ 36, 40, 51 ಜಮೀನುಗಳು ಇದ್ದವು. ಅದೇ ರೀತಿ ಚೆನ್ನಪ್ಪರವರಿಗೆ ಬ್ಯಾಲಾಳು ಗ್ರಾಮದ ಸರ್ವೆ ನಂ 35/1 ರಲ್ಲಿ 14 ಗುಂಟೆ ಜಮೀನು ಇತ್ತು ಎಂದರೆ ನಿಜ. ಅದೇ ರೀತಿ ದೊಣ್ಣೇನಹಳ್ಳಿಯಲ್ಲಿ ಚೆನ್ನಪ್ಪರವರಿಗೆ ಸರ್ವೆ ನಂ 41 ರಲ್ಲಿ 1 ಎಕರೆ ಜಮೀನು ಇತ್ತು ಎಂದರೆ ಇರಬಹುದು. ಸಾಕ್ಷಿಗೆ ಈಗ 4 ಪಹಣಿಗಳನ್ನು ತೋರಿಸಲಾಗಿ ಅದರಲ್ಲಿರುವ ಆಸ್ತಿಗಳು ಮೂಲತಃ ಚೆನ್ನಪ್ಪರವರಿಗೆ ಸೇರಿದ್ದ ಆಸ್ತಿಗಳು ಎಂದು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅವುಗಳನ್ನು ನಿಡಿ 1 ರಿಂದ 4 ಎಂದು ಗುರುತಿಸಲಾಯಿತು. ನಿಡಿ1 ರಿಂದ 4 ರ ಆಸ್ತಿಗಳು ಮತ್ತು ದಾವಾ ಆಸ್ತಿಯ ಆಸ್ತಿಗಳ ಬಗ್ಗೆ ಈ ಮೊದಲೇ ಚೆಲುವಯ್ಯ ಹಾಗೂ ಅವರ ಸಹೋದರರ ಮದ್ಯೆ ವಿಭಾಗ ಆಗಿರುತ್ತದೆ. ಚೆಲುವಯ್ಯ ಹಾಗೂ ಅವರ ಸಹೋದರರು ವಿಭಾಗ ಮಾಡಿಕೊಂಡ ಹಾಗೆ ಅವರವರ ಹೆಸರಿಗೆ ಆಸ್ತಿಗಳು ಮ್ಯುಟೇಷನ್ ಆಗಿರುತ್ತವೆ ಎಂದರೆ ನಿಜ. ಆ ವಿಭಾಗದ ಪ್ರಕಾರ ಆದ ಮ್ಯುಟೇಷನ್ ನಲ್ಲಿ ಸರ್ವೆ ನಂ 36/1 ರಲ್ಲಿ 17 ಗುಂಟೆ ಜಮೀನು ಚಲುವಯ್ಯರವರ ಹೆಸರಿಗೆ ಮ್ಯುಟೇಷನ್ ಆಗಿರುತ್ತದೆ ಎಂದರೆ ನಿಜ. ಸದರಿ 36 ಗುಂಟೆ ಜಮೀನಿನಲ್ಲಿ ನನ್ನ ಗಂಡ ಹಾಗೂ ಚೆನ್ನಪಿಳ್ಳಯ್ಯರವರು ತಲಾ 8 1/2 ಗುಂಟೆಯಂತೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನಿಜ. ನನ್ನ ಗಂಡ ಹಾಗೂ ಸಾಕ್ಷಿಗೆ ಈಗ 2 ಎಂ ಆರ್ ಗಳ ದೃಢೀಕೃತ ನಕಲುಗಳನ್ನು ತೋರಿಸಲಾಗಿ ಅವುಗಳಂತೆ ಬೆಟ್ಟಯ್ಯ ಹಾಗೂ ಚೆನ್ನಪಿಳ್ಳಯ್ಯರವರ ಹೆಸರಿಗೆ ಮ್ಯುಟೇಷನ್ ಆಗಿರುತ್ತದೆ ಎಂದು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅವುಗಳನ್ನು ನಿಡಿ 5 ಮತ್ತು 6 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ದಿನಾಂಕಃ 16-12-2007 ರ ಪಂಚಾಯ್ತಿ ಪಾರೀಖತ್ತಿನ ಜಮೀನಿನ ತಿದ್ದುಪಡಿಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ ಸದರಿ ಪತ್ರ ನನ್ನ ಗಂಡ ಹಾಗೂ ಚೆನ್ನಪಿಳ್ಳಯ್ಯರವರ ಮಕ್ಕಳ ಮದ್ಯೆ ಆಗಿರುತ್ತದೆ ಎಂದು ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ 7 ಎಂದು ಗುರುತಿಸಲಾಯಿತು. ನಿಡಿ 7 ರಲ್ಲಿ ತೋರಿಸಿದ ಆಸ್ತಿಗಳು ಬೆಟ್ಟಯ್ಯ ಹಾಗೂ ಚೆನ್ನಪಿಳ್ಳಯ್ಯರವರ ಮಕ್ಕಳ ಭಾಗಕ್ಕೆ ಬಂದಂತಹ ಆಸ್ತಿಗಳು ಎಂದರೆ ನಿಜ. ಸರ್ವೆ ನಂ 36/1 ರಲ್ಲಿ ಬೆಟ್ಟಯ್ಯ ಹಾಗೂ ಚೆನ್ನಪಿಳ್ಳಯ್ಯರವರ ಮದ್ಯೆ ಆದ ಭಾಗದ ಆಸ್ತಿಯನ್ನು ಕೆ ಹೆಚ್ ಬಿ ಯವರು ಭೂ ಸ್ವಾಧೀನತೆ ಮಾಡಿಕೊಂಡಿದ್ದು ಅದರಿಂದ ಬಂದ ಪರಿಹಾರದ ಹಣವನ್ನು ನಾವು ಪಡೆದಿರುತ್ತೇವೆ ಎಂದರೆ ನಿಜ. ಈ ದಾವೆಯಲ್ಲಿ ನಾನು ನಿಡಿ 1 ರಿಂದ 4 ರ ಆಸ್ತಿಗಳನ್ನು ಸೇರಿಸಿರುವುದಿಲ್ಲ ಎಂದರೆ ನಿಜ. ಈ ದಾವೆಯಲ್ಲಿ

ಈ ಹಿಂದೆ ಮಾರಾಟ ಮಾಡಿದ ಆಸ್ತಿಯನ್ನು ಹೊರತುಪಡಿಸಿ ಉಳಿದ ಪಿತ್ರಾರ್ಜಿತ ಆಸ್ತಿಗಳ ಮೇಲೆ ಈ ದಾವೆಯನ್ನು ಹೂಡಿಲ್ಲ. ಸಾಕ್ಷಿ ಮುಂದುವರೆದು ನಿಡಿ 1 ರಿಂದ 4ರ ಆಸ್ತಿಗಳು ನಮ್ಮದು ಇರುವುದಿಲ್ಲ ಎಂದು ಹೇಳುತ್ತಾರೆ. ನಿಡಿ 1 ರಿಂದ 4ರ ಆಸ್ತಿಗಳು ನನ್ನ ಗಂಡನ ತಂದೆಯ ತಂದೆ ಹೆಸರಿನಲ್ಲಿ ಮತ್ತು ನನ್ನ ಗಂಡನ ಹೆಸರಿನಲ್ಲಿರುವಂತಹ ಆಸ್ತಿಗಳು ಎಂದರೆ ನಿಜ. ಸಾಕ್ಷಿ ಮುಂದುವರೆದು ಹಿರಿಯ ಮಗ ಎಂದು ಅವರ ಹೆಸರಿಗೆ ಮಾಡಿಸಿದ್ದರು ಎಂದು ಹೇಳುತ್ತಾರೆ.

22. ಈ ದಾವೆಯನ್ನು ನಾನು ಸರ್ವೆ ನಂ 36ರ ಮೇಲೆ ಹೂಡಿರುತ್ತೇನೆ. ಸರ್ವೆ ನಂ 36ರಲ್ಲಿ ಒಟ್ಟು ವಿಸ್ತೀರ್ಣ 5 ಎಕರೆ 30 ಗುಂಟೆ ಇರಬಹುದು. ವಾದಪತ್ರದಲ್ಲಿ ಸರ್ವೆ ನಂ 36ರ ವಿಸ್ತೀರ್ಣ 5 ಎಕರೆ 30 ಗುಂಟೆ ಎಂಬುದಾಗಿ ಸೇರಿಸಿಲ್ಲ ಎಷ್ಟು ವಿಸ್ತೀರ್ಣ ಮಾಡಿಕೊಂಡಿರುತ್ತಾರೋ ಅದನ್ನು ಸೇರಿಸಿರುತ್ತೇನೆ ಎಂದು ಹೇಳುತ್ತಾರೆ. ಸರ್ವೆ ನಂ 36 ಯಾವಾಗ ಪೋಡಿಯಾಗಿರುತ್ತದೆ ಗೊತ್ತಿಲ್ಲ. ಸರ್ವೆ ನಂ 36 5 ಎಕರೆ 30 ಗುಂಟೆ ಜಮೀನನ್ನು ಮೂಲತಃ ಚೆನ್ನಪ್ಪರವರು ಖರೀದಿ ಮಾಡಿರುತ್ತಾರೆ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**